# ಕುವೆಂಪು ವಿಶ್ವವಿದ್ಯಾಲಯ

# ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳು

## ಸಭಾ ದಿನಾಂಕ : 18–03–2023

ಪ್ರಾಧಿಕಾರಗಳ ವಿಭಾಗ

ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577 451

ಶಿವಮೊಗ್ಗ ಜಿಲ್ಲೆ.

ಫ್ಯಾಕ್ಸ್: 08282-256262
ಇ-ಮೇಲ್ : drsyndicateku@gmail.com

☎08282-256148 (ಪ್ರಾಧಿಕಾರಗಳ ವಿಭಾಗ)
ವೆಬ್‌ಸೈಟ್ :www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ- 577 451

ಸಂಖ್ಯೆ: ಕುವಿ:ಯುಎಟಿ-1:ಎ.ಸಿ.01-23: 15 :2023-24 ದಿನಾಂಕ:12-04-2023

ಮಾನ್ಯರೆ,

ವಿಷಯ: ದಿನಾಂಕ:18-03-2023ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳು.

***

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ - 2000ರ ಪ್ರಕರಣ - 31(xviii) ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು- 2018 ಅಧ್ಯಾಯ-IIರ ಪ್ರಕರಣ- 17ರನ್ವಯ ದಿನಾಂಕ:18-03-2023ರಂದು ವಿಶ್ವವಿದ್ಯಾಲಯದ **"ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ"**ದಲ್ಲಿ ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ಸದರಿ ನಡಾವಳಿಗಳನ್ನು ಕಳುಹಿಸಿದ 21 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಗೆ,

ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ.

ಪ್ರತಿಗಳು:-

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8) ನಿರ್ದೇಶಕರು,ಐ,ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9) ಎಲ್ಲಾ ಅಧ್ಯಕ್ಷರು / ಸಂಚಾಲಕರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ./ಶಿವಮೊಗ್ಗ/ ಕಡೂರು./ ಚಿಕ್ಕಮಗಳೂರು
10) ಎಲ್ಲಾ ಉಪಕುಲಸಚಿವರು./ಸಹಾಯಕ ಕುಲಸಚಿವರುಗಳು/ ಅಧೀಕ್ಷಕರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
11) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ ಶಿವಮೊಗ್ಗ.
12) ನಿರ್ದೇಶಕರು, ಕುವೆಂಪು ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ. ಬಿ.ಹೆಚ್ ರಸ್ತೆ ಕಡೂರು.
13) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಚಿಕ್ಕಮಗಳೂರು. ಕುವೆಂಪು ವಿಶ್ವವಿದ್ಯಾಲಯ
14) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
15) ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
16) ಕಾರ್ಯಪಾಲಕ ಅಭಿಯಂತರರು, ವಿಶ್ವವಿದ್ಯಾಲಯ ಇಂಜಿನಿಯರಿಂಗ್ ವಿಭಾಗ, ವಿಶ್ವವಿದ್ಯಾಲಯ, ಶಂಕರಘಟ್ಟ.
17) ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಛಯ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
18) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
19) ಕಛೇರಿ ಪ್ರತಿ.

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:18-03-2023 ರಂದು ಶನಿವಾರ ಪೂರ್ವಾಹ್ನ:11.00 ಗಂಟೆಗೆ ವಿಶ್ವವಿದ್ಯಾಲಯದ **ಆಡಳಿತ ಭವನದ ಮೂರನೇ ಮಹಡಿಯ "ಸಿಂಡಿಕೇಟ್ ಸಭಾಂಗಣ"** ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಿದ್ದ ಸದಸ್ಯರು :**

| | | |
|---|---|---|
| 1. | ಪ್ರೊ. ಬಿ.ಪಿ ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. | ಪ್ರೊ. ಗೀತಾ ಸಿ. ಕುಲಸಚಿವರು (ಪ್ರಭಾರ) | ಸದಸ್ಯ ಕಾರ್ಯದರ್ಶಿ |
| 3. | ಡಾ. ಹೆಚ್.ಎಸ್. ವಿರೂಪಾಕ್ಷ., ಪ್ರಾಂಶುಪಾಲರು | ಸದಸ್ಯರು |
| 4. | ಶ್ರೀ ತ್ರಿಪುರ ಮಹೇಶ್ವರ ಎಂ., ಪ್ರಾಂಶುಪಾಲರು | ಸದಸ್ಯರು |
| 5. | ಡಾ. ಉಮೇಶ್ ಕೆ., ಪ್ರಾಂಶುಪಾಲರು | ಸದಸ್ಯರು |
| 6. | ಡಾ. ದುಗ್ಗಪ್ಪ ಎಂ.ಸಿ., ಪ್ರಾಂಶುಪಾಲರು | ಸದಸ್ಯರು |
| 7. | ಡಾ. ಶೇಖರ, ಪ್ರಾಂಶುಪಾಲರು | ಸದಸ್ಯರು |
| 8. | ಡಾ. ಪರಮೇಶ ಮಸಲವಾಡ., ಪ್ರಾಂಶುಪಾಲರು | ಸದಸ್ಯರು |
| 9. | ಡಾ. ಮುಷ್ತಾಕ್ ಅಹಮದ್., ಪ್ರಾಂಶುಪಾಲರು | ಸದಸ್ಯರು |
| 10. | ಡಾ. ಮಧು ಜಿ., ಪ್ರಾಂಶುಪಾಲರು | ಸದಸ್ಯರು |
| 11. | ಶ್ರೀ ವಿನ್‌ಸೆಂಟ್ ಕಾರ್ಡೋಜ., ಪ್ರಾಂಶುಪಾಲರು | ಸದಸ್ಯರು |
| 12. | ಶ್ರೀ ಚಂದ್ರಶೇಖರ ಎಸ್. | ಸದಸ್ಯರು |
| 13. | ಶ್ರೀ ಎಂ.ಎ. ರಮೇಶ್ ಹೆಗಡೆ | ಸದಸ್ಯರು |
| 14. | ಶ್ರೀಮತಿ ಗೀತಾಂಜಲಿ | ಸದಸ್ಯರು |
| 15. | ಶ್ರೀಮತಿ ಮಮತಾ ಸಾಲಿ., ಪ್ರಾಂಶುಪಾಲರು | ಸದಸ್ಯರು |
| 16. | ಶ್ರೀ ಕುಮಾರೇಗೌಡ | ಸದಸ್ಯರು |
| 17. | ಶ್ರೀ ಮನೋಜ್ ಸಲ್ಡಾನಾ | ಸದಸ್ಯರು |
| 18. | ಡಾ. ರವಿಕಿರಣ ಹೆಚ್.ಕೆ. | ಸದಸ್ಯರು |
| 19. | ಶ್ರೀ ಶಿವಣ್ಣ ಪಿ. | ಸದಸ್ಯರು |
| 20. | ಡಾ. ನರಸಿಂಹಮೂರ್ತಿ ಎಸ್.ಕೆ., ಪ್ರಾಧ್ಯಾಪಕರು | ಸದಸ್ಯರು |
| 21. | ಡಾ. ಪದ್ಮಮ್ಮ ಎಸ್. ಪ್ರಾಧ್ಯಾಪಕರು | ಸದಸ್ಯರು |
| 22. | ಡಾ. ಯೋಗೀಶ್ ಎಸ್.ಎನ್., ಪ್ರಾಧ್ಯಾಪಕರು | ಸದಸ್ಯರು |
| 23. | ಪ್ರೊ. ಬಿರಾದಾರ್ ಬಿ.ಎಸ್. ಡೀನರು,, ವಿಜ್ಞಾನ ನಿಕಾಯ | ಸದಸ್ಯರು |
| 24. | ಪ್ರೊ. ವೆಂಕಟೇಶ್ ಎಸ್, ಡೀನರು,, ವಾಣಿಜ್ಯ ನಿಕಾಯ | ಸದಸ್ಯರು |
| 25. | ಡಾ. ಗೀತಾ ಸಿ., ಡೀನರು,, ಶಿಕ್ಷಣ ನಿಕಾಯ | ಸದಸ್ಯರು |
| 26. | ಡಾ. ಆರ್.ಹೆಚ್. ವಾಲ್ಮೀಕಿ ಗ್ರಂಥಪಾಲಕರು, (ಪ್ರಭಾರ) | ಸದಸ್ಯರು |
| 27. | ಪ್ರೊ. ವೈ.ಎಲ್. ರಾಮಚಂದ್ರ., ನಿರ್ದೇಶಕರು ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ | ಸದಸ್ಯರು |
| 28. | ಡಾ. ನಾಗರಾಜ. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, | ಸದಸ್ಯರು |
| 29. | ಪ್ರೊ. ವೈ.ಎಲ್. ರಾಮಚಂದ್ರ., ಹಣಕಾಸು ಅಧಿಕಾರಿಗಳು | ಸದಸ್ಯರು |

**ಗೈರು ಹಾಜರಾದ ಸದಸ್ಯರು :**

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 2. | ಪ್ರೊ. ನವೀನ್ ಕುಮಾರ್ ಎಸ್.ಕೆ., ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 3. | ಶ್ರೀ ಓಂ ಪ್ರಕಾಶ್ ರಾಜೋಳೆ., ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರ ಪ್ರತಿನಿಧಿ | ಸದಸ್ಯರು |
| 4. | ಶ್ರೀ ಎಸ್. ರುದ್ರೇಗೌಡ., ಕರ್ನಾಟಕ ವಿಧಾನ ಪರಿಷತ್ ಸದಸ್ಯರು | ಸದಸ್ಯರು |
| 5. | ಡಾ. ಲಕ್ಷ್ಮೀಶ ಎ.ಎಸ್. ಪ್ರಾಂಶುಪಾಲರು | ಸದಸ್ಯರು |
| 6. | ಶ್ರೀಮತಿ ಎಸ್.ಬಿ. ಅನುಪಮ | ಸದಸ್ಯರು |
| 7. | ಡಾ. ಎಸ್. ಚಂದ್ರಶೇಖರ್, ಪ್ರಾಧ್ಯಾಪಕರು | ಸದಸ್ಯರು |
| 8. | ಡಾ. ಆರ್ತೋಟಬ ನಾಯಕ ವೈ., ಪ್ರಾಧ್ಯಾಪಕರು | ಸದಸ್ಯರು |
| 9. | ಡಾ. ಕೆ.ಎಂ. ಮಹಾದೇವನ್ ಪ್ರಾಧ್ಯಾಪಕರು | ಸದಸ್ಯರು |
| 10. | ಡಾ. ಜಿ. ಪ್ರಶಾಂತ್ ನಾಯಕ., ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ | ಸದಸ್ಯರು |
| 11. | ಡಾ. ಎನ್.ಡಿ. ವಿರೂಪಾಕ್ಷ (ಪ್ರಭಾರ), ನಿರ್ದೇಶಕರು, ದೈಹಿಕ ಶಿಕ್ಷಣ | ಸದಸ್ಯರು |
| 12. | ಪ್ರೊ. ಎನ್. ಬಿ. ತಿಪ್ಪೇಸ್ವಾಮಿ., ನಿರ್ದೇಶಕರು ಐ.ಕ್ಯೂ.ಎ.ಸಿ | ವಿಶೇಷ |
| 13. | ಡಾ. ಕೆ.ಎಂ. ಮಹಾದೇವನ್ ನಿರ್ದೇಶಕರು ದೂರ ಶಿಕ್ಷಣ ನಿರ್ದೇಶನಾಲಯ | ವಿಶೇಷ |

**ಪ್ರಸ್ತಾವನೆ:**

ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ವಿದ್ಯಾವಿಷಯಕ ಪರಿಷತ್ತಿಗೆ ನೂತನವಾಗಿ ನೇಮಕಗೊಂಡ ಕುಲಸಚಿವರಾದ ಪ್ರೊ.ಗೀತಾ, ಸಿ., ಡೀನರು, ಶಿಕ್ಷಣ ನಿಕಾಯ, ಹಣಕಾಸು ಅಧಿಕಾರಿಗಳಾದ ಪ್ರೊ.ವೈ.ಎಲ್.ರಾಮಚಂದ್ರ, ನಿರ್ದೇಶಕರು, ಪಿ.ಎಂ.ಇ., ಮಂಡಳಿ ಇವರನ್ನು ಮತ್ತು ಸಂಯೋಜಿತ ಕಾಲೇಜಿನ ಪ್ರಾಂಶುಪಾಲರುಗಳಾದ ಡಾ.ಲಕ್ಷ್ಮೀಶ, ಡಾ.ಹೆಚ್.ಎಸ್.ವಿರೂಪಾಕ್ಷಪ್ಪ, ಶ್ರೀ ತ್ರಿಪುರ ಮಹೇಶ್ವರ, ಡಾ.ಕೆ.ಉಮೇಶ, ಡಾ.ದುಗ್ಗಪ್ಪ, ಎಂ.ಸಿ., ಡಾ.ಶೇಖರ, ಡಾ.ಪರಮೇಶ ಮಸಲವಾಡ, ಡಾ.ಮುಷ್ತಾಕ್ ಅಹಮದ್, ಡಾ.ಮಧು, ಜಿ., ಹಾಗೂ ಡಾ.ವಿನ್‌ಸೆಂಟ್ ಕಾರ್ಡೋಜ ಇವರುಗಳನ್ನು ಸನ್ಮಾನಿಸಲಾಯಿತು.

ಮಾನ್ಯ ಕುಲಪತಿಯವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಕುಲಪತಿಗಳ ಸಭೆಯಲ್ಲಿ ಘನತೆವೆತ್ತ ರಾಜ್ಯಪಾಲರು ಎರಡು ವಿಷಯಗಳಿಗೆ ಹೆಚ್ಚಿನ ಒತ್ತನ್ನು ನೀಡಿದರು. ಮೊದಲನೆಯದಾಗಿ, ಮಾತೃಭಾಷಾ ಶಿಕ್ಷಣದ ಕುರಿತು ಮಾತನಾಡುತ್ತಾ, ಯೂರೋಪಿಯನ್ ದೇಶಗಳಲ್ಲಿ ಹಾಗೂ ರಷ್ಯಾ, ಚೈನಾ, ಜಪಾನ್ ಸೇರಿದಂತೆ ಮುಂದುವರೆದ ಹಲವಾರು ದೇಶಗಳಲ್ಲಿ ತಮ್ಮ ಮಾತೃಭಾಷೆಯಲ್ಲಿಯೇ ಶಿಕ್ಷಣ ನೀಡುತ್ತಿದ್ದು, ಇದರಿಂದ ಅವರಿಗೆ ಭಾಷೆಯ ಹಾಗೂ ಕಲಿಕಾ ಮಾಧ್ಯಮದ ಕುರಿತು ಯಾವುದೇ ತೊಂದರೆಯಾಗುತ್ತಿಲ್ಲ. ಆದರೆ, ನಮ್ಮಲ್ಲಿ ಹಿಂದಿನ ಮಕಾಲೆ ಶಿಕ್ಷಣ ಪದ್ಧತಿಯೇ ಇಂದಿಗೂ ಮುಂದುವರೆದಿದೆ. ಕಲಾ ಹಾಗೂ ಶಿಕ್ಷಣ ನಿಕಾಯಗಳ ಕೋರ್ಸ್‌ಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ಮಾತೃಭಾಷೆಯನ್ನು ಬಳಸುತ್ತಿದ್ದು, ವಾಣಿಜ್ಯ, ವಿಜ್ಞಾನ, ಇಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ಉಳಿದೆಲ್ಲಾ ಕೋರ್ಸ್‌ಗಳಲ್ಲಿ ಕೂಡ ಮಾತೃಭಾಷೆಯಲ್ಲಿ ಶಿಕ್ಷಣ ನೀಡುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ ಹೊಸ ಶಿಕ್ಷಣ ನೀತಿಯಲ್ಲಿ ಮಾತೃಭಾಷಾ ಶಿಕ್ಷಣಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಬೇಕೆಂದು ಕುಲಾಧಿಪತಿಯವರು ಸಲಹೆ ನೀಡಿದರು.

ಎರಡನೆಯದಾಗಿ, ವಿಶ್ವವಿದ್ಯಾಲಯಗಳಲ್ಲಿನ ಶೈಕ್ಷಣಿಕ ಮತ್ತು ಸಂಶೋಧನಾ ಅಭಿವೃದ್ಧಿಯ ಕುರಿತು ಮಾತನಾಡಿದ ಘನತೆವೆತ್ತ ಕುಲಾಧಿಪತಿಗಳು, ವಿಶ್ವವಿದ್ಯಾಲಯಗಳು ಪ್ರಮುಖವಾಗಿ ಎದುರಿಸುತ್ತಿರುವ ಅಧ್ಯಾಪಕ/ಅಧ್ಯಾಪಕೇತರ ನೌಕರರ ನೇಮಕಾತಿಗಳು ಸಕಾಲದಲ್ಲಿ ನಡೆಯದಿರುವುದು, ಹಣಕಾಸಿನ ಸಮಸ್ಯೆಗಳು ಹಾಗೂ ಹೊಸ ಶಿಕ್ಷಣ ನೀತಿಯ ಅನುಷ್ಠಾನದಲ್ಲಿನ ತೊಂದರೆಗಳ ಬಗ್ಗೆ ಕುಲಪತಿಗಳೊಂದಿಗೆ ಚರ್ಚಿಸಿದರು. ಕುವೆಂಪು ವಿಶ್ವವಿದ್ಯಾಲಯವು ಹೊಸ ಶಿಕ್ಷಣ ನೀತಿ ಹಾಗೂ ಯು.ಯು.ಸಿ.ಎಂ.ಎಸ್., ಸಾಫ್ಟ್‌ವೇರ್‌ನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದರಲ್ಲಿ ರಾಜ್ಯದಲ್ಲಿಯೇ ಮುಂದಿರುವುದರ ಬಗ್ಗೆ ಕುಲಾಧಿಪತಿಗಳು, ಉನ್ನತ ಶಿಕ್ಷಣ ಸಚಿವರು ಹಾಗೂ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದರು ಎಂದರು.

ಮುಂದುವರೆದು ಮಾತನಾಡಿದ ಮಾನ್ಯ ಕುಲಪತಿಯವರು, ವಿಶ್ವವಿದ್ಯಾಲಯದ 33ನೇ ವಾರ್ಷಿಕ ಘಟಿಕೋತ್ಸವವನ್ನು ಮುಂಬರುವ ಮೇ/ಜೂನ್-2023ರ ಮಾಹೆಯಲ್ಲಿ ಏರ್ಪಡಿಸಲು ಸಿದ್ಧತೆಗಳನ್ನು ಆರಂಭಿಸಲಾಗಿದೆ. ವಿಶ್ವವಿದ್ಯಾಲಯವು ಎನ್.ಐ.ಆರ್.ಎಫ್. ರ್‍ಯಾಂಕಿಂಗ್‌ನಲ್ಲಿ ಸತತವಾಗಿ 100ರ ಒಳಗಿನ ಸ್ಥಾನವನ್ನು ಕಾಪಾಡಿಕೊಂಡು ಬಂದಿರುವುದಕ್ಕಾಗಿ ಯು.ಜಿ.ಸಿ.ಯು ದೂರ ಶಿಕ್ಷಣದ ಓ.ಡಿ.ಎಲ್., ಕೋರ್ಸ್‌ಗಳಿಗೆ ಅವಕಾಶ ನೀಡಿದೆ. ದೇಶದಲ್ಲಿ ಕೆಲವೇ ವಿಶ್ವವಿದ್ಯಾಲಯಗಳು ಮಾತ್ರ ಈ ಅವಕಾಶ ಪಡೆದುಕೊಂಡಿವೆ. ಹೊಸ ಶಿಕ್ಷಣ ನೀತಿಯ ಪ್ರಕಾರ ವಿಶ್ವವಿದ್ಯಾಲಯಗಳು ಪದವಿ/ಸ್ನಾತಕೋತ್ತರ ಕೋರ್ಸ್‌ಗಳು ಮಾತ್ರವಲ್ಲದೇ, ಸರ್ಟಿಫಿಕೇಟ್ ಕೋರ್ಸ್‌ಗಳು, ಡಿಪ್ಲೊಮಾ, ಇಂಜಿನಿಯರಿಂಗ್, ಮೆಡಿಕಲ್ ಕೋರ್ಸ್‌ಗಳನ್ನು ಕೂಡ ಆರಂಭಿಸಬಹುದು ಎಂದು ತಿಳಿಸಿದರು. ನಂತರ, ಕಾರ್ಯಸೂಚಿಯ ಪ್ರಕಾರ ವಿಷಯಗಳನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

**2023:ಎಸಿ-1.01** ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ-2000 ರನ್ವಯ ಘನತೆವೆತ್ತ ಕುಲಾಧಿಪತಿಗಳಿಂದ ಅಂಕಿತಗೊಂಡಿರುವ ಪರಿನಿಯಮಗಳು, ಅಧ್ಯಾದೇಶಗಳು, ವಿನಿಯಮಗಳು ಮತ್ತು ನಿಯಮಗಳಿಗೆ ಸಂಬಂಧಿಸಿದ ವರದಿ.

ಯಾವುದೂ ಇಲ್ಲ

2023:ಎಸಿ-1.02 ಮಾನ್ಯ ಕುಲಪತಿಗಳು ಅಥವಾ ಸಿಂಡಿಕೇಟ್ ಮಂಡಿಸಿದ ವಿಷಯಗಳು

ಯಾವುದೂ ಇಲ್ಲ

## ಪ್ರಾಧಿಕಾರ ವಿಭಾಗ

**2023:ಎಸಿ-1.03** ದಿನಾಂಕ:15-11-2022ರಂದು ನಡೆದ **"ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆ"**ಯ ನಡಾವಳಿಗಳ ದೃಢೀಕರಣ.

**ಚರ್ಚೆ:** ಕುಲಸಚಿವರು ಮಾತನಾಡುತ್ತಾ, ದಿನಾಂಕ:15-11-2022ರಂದು ನಡೆದ "ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆ"ಯ ನಡಾವಳಿಗಳ ಮೇಲೆ ಯಾವುದೇ ತಿದ್ದುಪಡಿಗಾಗಿ ಮನವಿ ಅಥವಾ ಆಕ್ಷೇಪಣೆಗಳು ಸ್ವೀಕೃತವಾಗಿಲ್ಲದಿರುವುದರಿಂದ ಸಭೆಯ ದೃಢೀಕರಣಕ್ಕಾಗಿ ಮಂಡಿಸಲಾಗಿದೆ ಎಂದರು. ಸದಸ್ಯರಾದ ಡಾ.ರವಿಕಿರಣ, ಹೆಚ್.ಕೆ., ರವರು ಮಾತನಾಡುತ್ತಾ, ಸದರಿ ಸಭೆಯ ವಿಷಯ ಸಂಖ್ಯೆ:2022:ಎಸಿ-4.10 ರಲ್ಲಿ ವಿವಿಧ ನಿಕಾಯಗಳ ಸಭೆಗಳಿಗೆ ಗೈರು ಹಾಜರಾಗುತ್ತಿರುವ ವಿಶ್ವವಿದ್ಯಾಲಯದ ಅಧ್ಯಾಪಕರ ವಿರುದ್ಧ ಕ್ರಮಕ್ಕೆ ಆಗ್ರಹಿಸಲಾಗಿತ್ತು. ಅದಕ್ಕೆ ಏನು ಕ್ರಮ ಕೈಗೊಳ್ಳಲಾಗಿದೆ? ಎಂದು ಕೇಳಿದರು. ಮಾನ್ಯ ಕುಲಪತಿಯವರು ಆ ಸಂದರ್ಭದಲ್ಲಿ ಅಧ್ಯಾಪಕರಿಗೆ ವೆಕೇಷನ್ ರಜೆ ಇದ್ದುದ್ದರಿಂದ ಕೆಲವರು ಸಭೆಗೆ ಬಂದಿಲ್ಲ ಎಂದರು. ಇದಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿದ ಡಾ.ರವಿಕಿರಣ, ಹೆಚ್.ಕೆ., ರವರು ಸರ್ಕಾರದ ನಾಮನಿರ್ದೇಶಿತ ಸದಸ್ಯರುಗಳು ಹಾಗೂ ವಿವಿಧ ಕಾಲೇಜುಗಳ ಪ್ರಾಂಶುಪಾಲರು ತಮ್ಮೆಲ್ಲಾ ಕೆಲಸ-ಕಾರ್ಯಗಳನ್ನು ಬದಿಗೊತ್ತಿ ವಿಶ್ವವಿದ್ಯಾಲಯದ ಅಭಿವೃದ್ಧಿಯ ಜವಾಬ್ದಾರಿ ಇರುವ ಹಿನ್ನೆಲೆಯಲ್ಲಿ, ಬಹಳ ದೂರದ ಪ್ರದೇಶಗಳಿಂದ ಬಂದು ಭಾಗವಹಿಸುತ್ತೇವೆ. ಆದರೆ, ಕೇಂದ್ರ ಸ್ಥಾನದಲ್ಲಿ ಕಾರ್ಯನಿರ್ವಹಿಸುವ ಅಧ್ಯಾಪಕರು ಸಭೆಗಳಲ್ಲಿ ಭಾಗವಹಿಸುತ್ತಿಲ್ಲ. ಇಂದು ಕೂಡ ಬಹಳಷ್ಟು ಅಧ್ಯಾಪಕರು ವಿದ್ಯಾವಿಷಯಕ ಪರಿಷತ್ತಿನ ಸಭೆಗೆ ಗೈರು ಹಾಜರಾಗಿದ್ದಾರೆ. ಇದು ಒಪ್ಪತಕ್ಕ ಕ್ರಮವಲ್ಲ. ವಿಶ್ವವಿದ್ಯಾಲಯದ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಸಲುವಾಗಿ ಹಲವಾರು ವಿಷಯಗಳ ಕುರಿತು ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾಗುತ್ತದೆ. ಆದರೆ, ಇದರಲ್ಲಿ ವಿಶ್ವವಿದ್ಯಾಲಯದ ಅಧ್ಯಾಪಕರೇ ಭಾಗವಹಿಸದಿರುವುದು ಅತ್ಯಂತ ಗಂಭೀರವಾದ ವಿಷಯವಾಗಿದೆ. ಆದುದರಿಂದ, ಹಿಂದಿನ ನಿಕಾಯ ಸಭೆಗಳು ಮತ್ತು ಇಂದಿನ ವಿದ್ಯಾವಿಷಯಕ ಪರಿಷತ್ತಿನ ಸಭೆಗೆ ಗೈರು ಹಾಜರಾಗಿರುವ ಎಲ್ಲಾ ಅಧ್ಯಾಪಕರಿಂದ ಸೂಕ್ತ ಸಮಜಾಯಿಷಿ ಪಡೆದು ಮುಂದಿನ ಸಭೆಗೆ ಸಲ್ಲಿಸುವಂತೆ ಸೂಚಿಸಿದರು. ಕೆಲ ಸದಸ್ಯರು ಇದನ್ನು ಬೆಂಬಲಿಸಿದರು.

ಸದಸ್ಯರಾದ ಶ್ರೀ ಮನೋಜ್ ಸಲ್ಡಾನಾರವರು ಮಾತನಾಡಿ ಹಿಂದಿನ ಸಭೆಯ ವಿಷಯ ಸಂಖ್ಯೆ: 2022:ಎಸಿ-4.26ರಲ್ಲಿ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಯ ಸ್ಥಳೀಯ ಉತ್ಪನ್ನಗಳಾದ ಶಿಕಾರಿಪುರದ ಅಕ್ಕಿ ಮತ್ತು ಅಡಿಕೆ ಹಾಗೂ ರಾಷ್ಟ್ರಕವಿ ಕುವೆಂಪು ಮತ್ತು ಸಾಗರದ ಹಸೆ ಚಿತ್ತಾರ ಚಿತ್ರಕಲೆಗೆ ಪೇಟೆಂಟ್ ಹೊಂದುವ ಬಗ್ಗೆ ಕ್ರಮ ಕೈಗೊಳ್ಳುವಂತೆ ನಿರ್ಣಯಿಸಲಾಗಿತ್ತು. ಈ ಬಗ್ಗೆ ಏನು ಪ್ರಗತಿಯಾಗಿದೆ? ಎಂದರು. ಈ ಕುರಿತಾಗಿ ಶೈಕ್ಷಣಿಕ ವಿಭಾಗದಿಂದ ಕ್ರಮವಹಿಸಲಾಗುವುದು ಎಂದು ಕುಲಸಚಿವರು ಸಭೆಗೆ ತಿಳಿಸಿದರು. ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸ್‌ಗೆ ಈಗ ಬಹು ಬೇಡಿಕೆಯಿದ್ದು, ಇದನ್ನು ಆರಂಭಿಸುವಂತೆ ಬಹಳ ಹಿಂದೆಯೇ ಚರ್ಚಿಸಲಾಗಿದ್ದು, ಈವರೆಗೆ ಏನೂ ಕ್ರಮ ಕೈಗೊಂಡಿಲ್ಲ. ಕೋರ್ಸ್ ಆರಂಭಿಸಲು ಶಿವಮೊಗ್ಗದ ಹರ್ಷ ಫರ್ನ್ ಹೋಟೆಲ್‌ನವರು ಹಾಗೂ ಪಿ.ಇ.ಎಸ್. ಶಿಕ್ಷಣ ಸಂಸ್ಥೆಯವರು ಆಸಕ್ತಿ ಹೊಂದಿದ್ದು, ವಿಶ್ವವಿದ್ಯಾಲಯದಿಂದ ಅಗತ್ಯ ಮಂಜೂರಾತಿ ಪ್ರಕ್ರಿಯೆ ನಡೆಸುವಂತೆ ಸೂಚಿಸಿದರು. ಮಾಹಿತಿ ನೀಡಿ ಮಾತನಾಡಿದ ಕಾಲೇಜು ಅಭಿವೃದ್ಧಿ ಪರಿಷತ್ತಿನ ನಿರ್ದೇಶಕರಾದ ಪ್ರೊ.ನಾಗರಾಜರವರು, ಕೋರ್ಸ್ ಆರಂಭಿಸಲು ಅನುಮತಿಗಾಗಿ ಸದರಿ ಸಂಸ್ಥೆಯವರು ಪತ್ರ ಬರೆದಿದ್ದಾರೆ. ಆದರೆ ಸಂಯೋಜನೆ ಕೋರಿ ಅರ್ಜಿ ಸಲ್ಲಿಸಿಲ್ಲ ಎಂದರು. ಈ ಸಂದರ್ಭದಲ್ಲಿ ಮಾತನಾಡಿದ ಕಲಾ ನಿಕಾಯದ ಡೀನರಾದ ಪ್ರೊ.ಎಸ್.ಎನ್.ಯೋಗೀಶ್‌ರವರು ಯಾವುದೇ ಹೊಸ ಕೋರ್ಸ್ ಆರಂಭಿಸುವಾಗ ಪರಿನಿಯಮ, ವಿನಿಯಮಗಳನ್ನು ಸಿದ್ಧಪಡಿಸಿ ಅನುಮೋದನೆ ಪಡೆಯಬೇಕು. ಅಲ್ಲದೆ, ಕೋರ್ಸ್‌ಗೆ ಅಗತ್ಯ ಮೂಲಭೂತ ಸೌಲಭ್ಯಗಳು ಅವಶ್ಯಕವಾಗಿರುತ್ತದೆ. ಆದರೆ, ಈಗ ಹೊಸ ಶಿಕ್ಷಣ ನೀತಿ ಅನುಷ್ಠಾನವಾಗಿದ್ದು, ಇದರಲ್ಲಿ ಇರುವ ಕೋರ್ಸ್‌ಗಳನ್ನು ಮಾತ್ರ ಆರಂಭಿಸಲು ಅವಕಾಶವಿದೆ. ಅಲ್ಲದೆ, ಎನ್.ಇ.ಪಿ.ಯಲ್ಲಿರುವ ಸಿಲೆಬಸ್ಸನ್ನೇ ಅಳವಡಿಸಿಕೊಳ್ಳಬೇಕು. ಎನ್.ಇ.ಪಿ., ಸಿಲೆಬಸ್ ಬದಲಾಯಿಸಲು ವಿಶ್ವವಿದ್ಯಾಲಯಗಳಿಗೆ ಅವಕಾಶವಿಲ್ಲ ಹಾಗೂ ಎನ್.ಇ.ಪಿ.,ಯಲ್ಲಿ ಇಲ್ಲದ ಕೋರ್ಸ್‌ಗಳನ್ನು ತೆರೆಯಲು ಕೂಡ ಅವಕಾಶವಿಲ್ಲ ಎಂದರು. ಆದಾಗ್ಯೂ, ನಾಟಕ, ಹಸೆಚಿತ್ರ ಹಾಗೂ ಹೋಟೆಲ್ ಮ್ಯಾನೇಜ್‌ಮೆಂಟ್‌ನಲ್ಲಿ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ತೆರೆಯಬಹುದಾಗಿದ್ದು, ಇದಕ್ಕೆ ಅಗತ್ಯವಿರುವ ವಿನಿಯಮ ಮತ್ತು ಪರಿನಿಯಮ ಸಿದ್ಧಪಡಿಸಲು ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಮೇಲ್ಕಂಡಂತೆ ತೆಗೆದುಕೊಂಡಿರುವ ನಿರ್ಣಯಗಳನ್ನು ಆದಷ್ಟು ಬೇಗನೆ ಅನುಷ್ಠಾನಗೊಳಿಸಲು ಸೂಚಿಸಿದ ಸಭೆಯು, ದಿನಾಂಕ:15–11–2022ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ನಡಾವಳಿಗಳನ್ನು ದೃಢೀಕರಿಸಿತು.

**2023:ಎಸಿ–1.04** ದಿನಾಂಕ:10–01–2023 ರಂದು ನಡೆದ **"ಆನ್‌ಲೈನ್ ವಿದ್ಯಾವಿಷಯಕ ಪರಿಷತ್ ಸಮಿತಿ ಸಭೆ"**ಯ ನಡಾವಳಿಗಳ ದೃಢೀಕರಣ.

**ನಿರ್ಣಯ:** ದಿನಾಂಕ:10–01–2023 ರಂದು ನಡೆದ **"ಆನ್‌ಲೈನ್ ವಿದ್ಯಾವಿಷಯಕ ಪರಿಷತ್ ಸಮಿತಿ ಸಭೆ"**ಯ ನಡಾವಳಿಗಳ ಕುರಿತಾಗಿ ಯಾವುದೇ ತಿದ್ದುಪಡಿಗಳು ಹಾಗೂ ಆಕ್ಷೇಪಣೆಗಳು ಬಂದಿಲ್ಲವಾದ್ದರಿಂದ ನಡಾವಳಿಗಳನ್ನು ಸಭೆಯು ದೃಢೀಕರಿಸಿತು.

**2023:ಎಸಿ–1.05** ಬಿ.ಇಡಿ. ಕೋರ್ಸ್‌ನ ನೂತನ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ 2022–23ನೇ ಶೈಕ್ಷಣಿಕ ಸಾಲಿನ ಬಿ.ಇಡಿ., ಕೋರ್ಸ್‌ನ ಪಠ್ಯಕ್ರಮವನ್ನು ಸಿದ್ಧಪಡಿಸಿ ಅಧ್ಯಯನ ಮಂಡಳಿಯ ಅನುಮೋದನೆಯೊಂದಿಗೆ ಮಾನ್ಯ ಕುಲಪತಿಯವರ ಅನುಮೋದನೆ ಪಡೆದು, ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಜಾರಿಗೊಳಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2023:ಎಸಿ–1.06** ದೂರ ಶಿಕ್ಷಣ ಓ.ಡಿ.ಎಲ್. ವಾರ್ಷಿಕ ಪದ್ಧತಿ ಪಠ್ಯಕ್ರಮವನ್ನು ಸೆಮಿಸ್ಟರ್ ಪದ್ಧತಿಗೆ ವಿಂಗಡನೆ ಮಾಡಿರುವ ಪಠ್ಯಕ್ರಮಗಳ ಅನುಮೋದನೆ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡುತ್ತಾ, ದೂರಶಿಕ್ಷಣ ನಿರ್ದೇಶನಾಲಯದ ವತಿಯಿಂದ ಪ್ರಾರಂಭಿಸಲಾಗಿರುವ ಸ್ನಾತಕ/ಸ್ನಾತಕೋತ್ತರ ಆನ್‌ಲೈನ್ ಪದವಿ ಕೋರ್ಸ್‌ಗಳಿಗೆ ಜನವರಿ–2020 ಹಾಗೂ ಜುಲೈ–2021ರ ಆವೃತ್ತಿ–1ರಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಈಗಾಗಲೇ ಶೈಕ್ಷಣಿಕ ಚಟುವಟಿಕೆಗಳು ಆರಂಭವಾಗದೇ ವಿಳಂಬವಾಗಿರುವುದರಿಂದ, ಪ್ರಸ್ತುತ ಚಾಲ್ತಿಯಲ್ಲಿರುವ ಓ.ಡಿ.ಎಲ್., ವಾರ್ಷಿಕ ಪದ್ಧತಿಯ ಪಠ್ಯಕ್ರಮವನ್ನು ಸೆಮಿಸ್ಟರ್ ಪದ್ಧತಿಗೆ ವಿಂಗಡಣೆ/ಹಂಚಿಕೆ ಮಾಡಿ ಅಧ್ಯಯನ ಮಂಡಳಿಗಳ ಅನುಮೋದನೆ ಪಡೆಯಲಾಗಿದ್ದು, ಸದರಿ ಪಠ್ಯಕ್ರಮವನ್ನು 2 ಆವೃತ್ತಿಗಳ ವಿದ್ಯಾರ್ಥಿಗಳಿಗೆ ಮಾತ್ರ ಪದವಿ ಪೂರೈಸುವವರೆಗೆ ಅನ್ವಯಿಸುವಂತೆ ವಿದ್ಯಾವಿಷಯಕ ಪರಿಷತ್ತಿನ ಅನುಮೋದನೆ ಕಾಯ್ದಿರಿಸಿ ಅಳವಡಿಸಿಕೊಳ್ಳಲಾಗಿದ್ದು, ಇದನ್ನು ಸಭೆಯ ಅನುಮೋದನೆ ಹಾಗೂ ಸ್ಥಿರೀಕರಣಕ್ಕಾಗಿ ಮಂಡಿಸಿದೆ ಎಂದರು. ಕಲಾ ನಿಕಾಯದ ಡೀನರಾದ ಪ್ರೊ.ಎಸ್.ಎನ್.ಯೋಗೇಶ್ ರವರು ಮಾತನಾಡಿ, ಮುಂದೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗಾಗಿ ಹೊಸ ಪಠ್ಯಕ್ರಮ ಸಿದ್ಧಪಡಿಸಿ, ಅಧ್ಯಯನ ಮಂಡಳಿಯ ಅನುಮೋದನೆ ಪಡೆದು ಅನುಷ್ಠಾನಗೊಳಿಸಬೇಕು ಹಾಗೂ ಪ್ರಸ್ತುತ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ತಕ್ಷಣವೇ ಆನ್‌ಲೈನ್ ಮೂಲಕ ತರಗತಿಗಳನ್ನು ನಡೆಸಬೇಕೆಂದರು. ಸದಸ್ಯರಾದ ಪ್ರೊ.ಎಸ್.ಕೆ.ನರಸಿಂಹಮೂರ್ತಿರವರು ಮಾತನಾಡುತ್ತಾ, ಯಾವ ರೀತಿ ಆನ್‌ಲೈನ್ ತರಗತಿ ನಡೆಸಬೇಕು ಎಂಬುದರ ಸ್ಪಷ್ಟ ಮಾಹಿತಿ ಇಲ್ಲ. ಆದ್ದರಿಂದ ಇದರಲ್ಲಿರುವ ಸಮಸ್ಯೆಗಳನ್ನು ಬಗೆಹರಿಸಿಕೊಂಡು ತಕ್ಷಣವೇ ತರಗತಿ ನಡೆಸಲು ಕ್ರಮವಹಿಸಬೇಕೆಂದರು. ಕುಲಸಚಿವರು ಮಾಹಿತಿ ನೀಡುತ್ತಾ ದೂರಶಿಕ್ಷಣ ನಿರ್ದೇಶನಾಲಯದಲ್ಲಿ ಕೆಲ ವರ್ಷಗಳಿಂದ ಹಲವರು ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿದ್ದು, ಖಾಯಂ ನಿರ್ದೇಶಕರಿಲ್ಲದೆ ತೊಂದರೆಯಾಗುತ್ತಿದೆ. ಆದುದರಿಂದ ಆದಷ್ಟು ಬೇಗನೆ ಖಾಯಂ ನಿರ್ದೇಶಕರನ್ನು ನೇಮಕ ಮಾಡಿದಲ್ಲಿ ಬಹಳಷ್ಟು ಸಮಸ್ಯೆಗಳು ಪರಿಹಾರವಾಗುತ್ತವೆ ಎಂದರು. ಈ ಸಂದರ್ಭದಲ್ಲಿ ಮಾತನಾಡಿದ ಸದಸ್ಯರಾದ ಶ್ರೀಮತಿ ಗೀತಾಂಜಲಿರವರು ಪ್ರಸ್ತುತ ಇರುವ ನಿರ್ದೇಶಕರ ನೇಮಕಾತಿ ಯಾವ ರೀತಿಯಲ್ಲಾಗಿದೆ? ಬಹಳಷ್ಟು ಹಿರಿಯ ಅನುಭವಿ ಪ್ರಾಧ್ಯಾಪಕರನ್ನು ಏಕ ಪರಿಗಣಿಸಿಲ್ಲ? ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಯವರು, ಈಗ ನೇಮಕ ಮಾಡಿರುವ ನಿರ್ದೇಶಕರು ಈ ಹಿಂದೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಹಾಗೂ ಮೈಸೂರು ವಿಶ್ವವಿದ್ಯಾಲಯಗಳಲ್ಲಿ ಕುಲಸಚಿವ (ಮೌಲ್ಯಮಾಪನ) ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿದ ಅನುಭವ ಹೊಂದಿದ್ದರಿಂದ ಅವರನ್ನು ಪರಿಗಣಿಸಲಾಗಿದೆ ಎಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ, ದೂರಶಿಕ್ಷಣ ನಿರ್ದೇಶನಾಲಯದ ವತಿಯಿಂದ ಪ್ರಾರಂಭಿಸಲಾಗಿರುವ ಸ್ನಾತಕ/ ಸ್ನಾತಕೋತ್ತರ ಆನ್‌ಲೈನ್ ಪದವಿ ಕೋರ್ಸ್‌ಗಳಿಗೆ ಜನವರಿ–2020 ಹಾಗೂ ಜುಲೈ–2021ರ ಆವೃತ್ತಿ–1ರಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಈಗಾಗಲೇ ಶೈಕ್ಷಣಿಕ ಚಟುವಟಿಕೆಗಳು ವಿಳಂಬವಾಗಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಓ.ಡಿ.ಎಲ್. ವಾರ್ಷಿಕ ಪದ್ಧತಿಯ ಪಠ್ಯಕ್ರಮವನ್ನು ಸೆಮಿಸ್ಟರ್ ಪದ್ಧತಿಗೆ ವಿಂಗಡಣೆ/ಹಂಚಿಕೆ ಮಾಡಿ ಅಧ್ಯಯನ ಮಂಡಳಿಗಳ ಅನುಮೋದನೆ ಪಡೆದುಕೊಂಡು, ಸದರಿ ಪಠ್ಯಕ್ರಮವನ್ನು 2 ಆವೃತ್ತಿಗಳ ವಿದ್ಯಾರ್ಥಿಗಳಿಗೆ ಮಾತ್ರ ಪದವಿ ಪೂರೈಸುವವರೆಗೆ ಅನ್ವಯಿಸುವಂತೆ ವಿದ್ಯಾವಿಷಯಕ ಪರಿಷತ್ತಿನ ಅನುಮೋದನೆ ಕಾಯ್ದಿರಿಸಿ ಅಳವಡಿಸಿಕೊಂಡಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

## ಹಣಕಾಸು ವಿಭಾಗ

**2023:ಎಸಿ–1.07** 2023–24ನೇ ಆರ್ಥಿಕ ವರ್ಷದ ಆಯ–ವ್ಯಯ ಅಂದಾಜು ಪರಿಶೀಲನೆ ಮತ್ತು ಅನುಮೋದನೆ ಕುರಿತು.

**ಚರ್ಚೆ:** ಹಣಕಾಸು ಅಧಿಕಾರಿಗಳು ಮಾತನಾಡುತ್ತಾ, ವಿಶ್ವವಿದ್ಯಾಲಯದ 2023–24ನೇ ಸಾಲಿನ ಆಯವ್ಯಯವು ದಿನಾಂಕ:15–03–2023ರಂದು ನಡೆದ ಹಣಕಾಸು ಸಮಿತಿಯ ಸಭೆಯಲ್ಲಿ ಹಾಗೂ ದಿನಾಂಕ:17–03–2023ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಯಾಗಿದ್ದು, ವಿದ್ಯಾವಿಷಯಕ ಪರಿಷತ್ತಿನ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ರೂ.244.58 ಲಕ್ಷಗಳ ಕೊರತೆ ಆಯವ್ಯಯವನ್ನು ಪವರ್ ಪಾಯಿಂಟ್ ಮೂಲಕ ಮಂಡಿಸಿ, ಸಭೆಗೆ ವಿವರ ನೀಡಿದರು. ಸದಸ್ಯರುಗಳು ಮಾತನಾಡಿ ಅನುದಾನದ ಕೊರತೆಯನ್ನು ಹೇಗೆ ನೀಗಿಸುತ್ತೀರಿ ಎಂದರು. ಇದಕ್ಕೆ ಉತ್ತರಿಸಿದ ಹಣಕಾಸು ಅಧಿಕಾರಿಗಳು, ಶುಲ್ಕಗಳನ್ನು ಪರಿಷ್ಕರಿಸಿ ಹೆಚ್ಚಿಸಬೇಕು ಹಾಗೂ ದಾನಿಗಳ ಸಹಾಯ ಪಡೆಯಬೇಕಾಗುತ್ತದೆ ಎಂದರು. ಪ್ರೊ.ಎಸ್.ಕೆ.ನರಸಿಂಹಮೂರ್ತಿರವರು ಮಾತನಾಡಿ ಎಸ್.ಸಿ.ಪಿ./ಟಿ.ಎಸ್.ಪಿ. ಸ್ವೀಕೃತಿ 0 ಎಂದು ನಮೂದಿಸಿದೆ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಈ ಅನುದಾನ ಪಡೆಯಲು ಪ್ರಯತ್ನಿಸಿ ಎಂದರು. ಹಣಕಾಸು ಅಧಿಕಾರಿಗಳು ಮಾಹಿತಿ ನೀಡಿ, ಸರ್ಕಾರದಿಂದ ಸ್ವೀಕೃತಿ 0 ಇದ್ದರೂ ಕೂಡ ವೆಚ್ಚದಲ್ಲಿ ರೂ. 171.1 ಲಕ್ಷಗಳನ್ನು ಒದಗಿಸಲಾಗಿದ್ದು, ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ ಎಂದರು.

ಸದಸ್ಯರಾದ ಶ್ರೀ. ರವಿಕಿರಣ, ಹೆಚ್.ಕೆ. ರವರು ಮಾತನಾಡಿ ರೂ.244.58 ಲಕ್ಷಗಳ ಕೊರತೆ ಇದ್ದು, ಇನ್ನೂ ರೂ.500 ಲಕ್ಷಗಳನ್ನು ಸರ್ಕಾರದಿಂದ ನಿರೀಕ್ಷಿತ ಎಂದು ತಿಳಿಸಿರುವಿರಿ. ಸದರಿ ಅನುದಾನ ಸರ್ಕಾರದಿಂದ ಬಿಡುಗಡೆಯಾಗದಿದ್ದಲ್ಲಿ ಯಾವ ರೀತಿ ಸರಿದೂಗಿಸುತ್ತೀರಿ ಎಂದರು. ಮಾನ್ಯ ಕುಲಪತಿಗಳು ಮಾತನಾಡಿ, ದಿನಾಂಕ:15–03–2023ರಂದು ಬೆಂಗಳೂರಿನಲ್ಲಿ ವಿಶ್ವವಿದ್ಯಾಲಯದ ಹಣಕಾಸು ಸಮಿತಿ ಸಭೆ ನಡೆಸಿದ್ದು, ಸರ್ಕಾರವು ವೇತನ ಭತ್ಯೆಗಳು ಹಾಗೂ ನಿವೃತ್ತಿ ವೇತನದ ಅನುದಾನವನ್ನು ಮಾತ್ರ ಮಂಜೂರು ಮಾಡಿದ್ದು, ಅಭಿವೃದ್ಧಿ ಅನುದಾನ ಹಾಗೂ ಎಸ್.ಸಿ.ಪಿ., /ಟಿ.ಎಸ್.ಪಿ., ಅನುದಾನ ಒದಗಿಸಿಲ್ಲ. ಅಲ್ಲದೆ, ಅತಿಥಿ ಉಪನ್ಯಾಸಕರ ಗೌರವಧನ ಪರಿಷ್ಕರಣೆಯಿಂದಾಗಿ ವಿಶ್ವವಿದ್ಯಾಲಯದ ಹಣಕಾಸಿನ ಸ್ಥಿತಿಗತಿಯ ಮೇಲೆ ಪರಿಣಾಮ ಬೀರುತ್ತದೆ. ಕಳೆದ ವರ್ಷ ವಾರ್ಷಿಕ ರೂ.6.00 ಕೋಟಿಯಷ್ಟಿದ್ದ ಅತಿಥಿ ಉಪನ್ಯಾಸಕರ ಗೌರವಧನವು ಪರಿಷ್ಕರಣೆಯಿಂದಾಗಿ ರೂ.11.00 ಕೋಟಿಗಳಿಗೆ ಹೆಚ್ಚಳವಾಗಿದೆ. ಹೊರಗುತ್ತಿಗೆ ನೌಕರರ ವೇತನಕ್ಕೆ ರೂ.7.00 ಕೋಟಿಗಳಷ್ಟು ವಾರ್ಷಿಕ ವೆಚ್ಚವಾಗುತ್ತದೆ. ಅತಿಥಿ ಉಪನ್ಯಾಸಕರ ಗೌರವಧನವನ್ನು ಪರಿಷ್ಕರಿಸಿ ಸರ್ಕಾರಿ ಕಾಲೇಜುಗಳಲ್ಲಿ ನಿಗದಿಪಡಿಸಿರುವಷ್ಟು ನೀಡುವುದು ಮತ್ತು ಹೊರಗುತ್ತಿಗೆ ನೌಕರರ ಸಂಖ್ಯೆಯನ್ನು ಕಡಿತಗೊಳಿಸಬೇಕಾಗಿದೆ. ಇಲ್ಲವಾದಲ್ಲಿ ಆರ್ಥಿಕ ಸಮಸ್ಯೆಯಾಗುತ್ತದೆ ಎಂದರು.

ಸದಸ್ಯರಾದ ಶ್ರೀಮತಿ ಗೀತಾಂಜಲಿರವರು ಮಾತನಾಡಿ, ಆಂತರಿಕ ಸಂಪನ್ಮೂಲದಲ್ಲಿ ಹೆಚ್ಚಿನ ಹಣ ಅತಿಥಿ ಉಪನ್ಯಾಸಕರು ಹಾಗೂ ಹೊರಗುತ್ತಿಗೆ ನೌಕರರ ವೇತನಕ್ಕೇ ವೆಚ್ಚವಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಹೊರಗುತ್ತಿಗೆ ನೌಕರರ ಸಂಖ್ಯೆ ಹೆಚ್ಚುತ್ತಲೇ ಇದೆ. ವಿಶ್ವವಿದ್ಯಾಲಯದಲ್ಲಿ ಆರ್ಥಿಕ ಶಿಸ್ತು ತರುವ ಅಗತ್ಯವಿದ್ದು, ಹೊರಗುತ್ತಿಗೆ ನೌಕರರ ಸಂಖ್ಯೆಯನ್ನು ಕಡಿಮೆ ಮಾಡಲೇಬೇಕು. ಇದಕ್ಕಾಗಿ ಕಾರ್ಮಿಕ ಇಲಾಖೆಯ ನಿಯಮಗಳನ್ವಯ ವಯೋಮಿತಿ ತಲುಪಿದವರನ್ನು ಕಡ್ಡಾಯವಾಗಿ ನಿವೃತ್ತಿಗೊಳಿಸಬೇಕು ಹಾಗೂ ನೌಕರರ ಸೇವೆ ಹಾಗೂ ನಡವಳಿಕೆಗಳ ಬಗ್ಗೆ ದೂರುಗಳು ಬಂದಿರುವವರನ್ನು ಸೇವೆಯಿಂದ ವಜಾಗೊಳಿಸಬೇಕು. ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ಅಧ್ಯಾಪಕೇತರ ನೌಕರರ ಸಂಖ್ಯೆಯಲ್ಲಿ ಖಾಲಿ ಉಳಿದಿರುವ ಹುದ್ದೆಗಳಿಗಷ್ಟೇ ಹೊರಗುತ್ತಿಗೆ ನೌಕರರನ್ನು ಸೀಮಿತಗೊಳಿಸಬೇಕು. ಅಲ್ಲದೆ, ಪ್ರಸ್ತುತ ಇರುವ ಟೆಂಡರ್ ಮುಗಿಯುವ ಮುನ್ನವೇ ಸರ್ಕಾರದ ಅನುಮತಿ ಪಡೆದು ಹೊಸ ಟೆಂಡರ್ ಮಾಡಬೇಕು. ಹೀಗೆ ನಿಯಮಗಳನ್ನು ಸಮರ್ಪಕವಾಗಿ ಪಾಲಿಸಿದಲ್ಲಿ ಹೊರಗುತ್ತಿಗೆ ನೌಕರರ ವೇತನವನ್ನು ಸರ್ಕಾರದಿಂದ ಪಡೆಯಬಹುದು ಎಂದರು.

ಸದಸ್ಯರಾದ ಶ್ರೀ ಮನೋಜ್ ಸಲ್ಡಾನಾರವರು ಮಾತನಾಡಿ, ಅತಿಥಿ ಉಪನ್ಯಾಸಕರ ಸಂಖ್ಯೆಯನ್ನು ಕೂಡ ಮಿತಿಗೊಳಿಸಬೇಕು. ಸಮರ್ಪಕವಾಗಿ ವರ್ಕ್‌ಲೋಡ್ ಸಿದ್ಧಪಡಿಸಿ, ಪರಿಶೀಲಿಸಿ, ಖಾಯಂ ಅಧ್ಯಾಪಕರಿಗೆ ಹಂಚಿಕೆಯಾದ ನಂತರ ಉಳಿಯುವ ವರ್ಕ್‌ಲೋಡ್‌ಗೆ ವಿಶ್ವವಿದ್ಯಾಲಯದಲ್ಲಿರುವ ಪಿಹೆಚ್.ಡಿ. ಸಂಶೋಧಕರು ಕೂಡ ವಾರದಲ್ಲಿ ಇಂತಿಷ್ಟು ಬೋಧನಾ/ ಪ್ರಾಯೋಗಿಕ ತರಗತಿಗಳನ್ನು ತೆಗೆದುಕೊಳ್ಳಬೇಕು ಎಂಬುದನ್ನು ಕಡ್ಡಾಯಗೊಳಿಸಬೇಕು. ನಂತರದಲ್ಲಿ ಉಳಿಯುವ ವರ್ಕ್‌ಲೋಡ್‌ಗೆ ಮಾತ್ರ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಬೇಕು. ಈ ವ್ಯವಸ್ಥೆಯನ್ನು ಬನಾರಸ್ ಹಿಂದೂ ವಿಶ್ವವಿದ್ಯಾಲಯ ಹಾಗೂ ಬೆಂಗಳೂರು ವಿಶ್ವವಿದ್ಯಾಲಯ ಸೇರಿದಂತೆ ಕೆಲವು ವಿಶ್ವವಿದ್ಯಾಲಯಗಳಲ್ಲಿ ಅಳವಡಿಸಿಕೊಂಡಿದ್ದು, ಈ ಬಗ್ಗೆ ಮಾಹಿತಿ ಪಡೆದುಕೊಳ್ಳಿ, ಈ ವ್ಯವಸ್ಥೆಯ ಮೂಲಕ ಅತಿಥಿ ಉಪನ್ಯಾಸಕರ ಸಂಖ್ಯೆಯನ್ನು ಕಡಿತಗೊಳಿಸುವ ಮೂಲಕ ಆರ್ಥಿಕ ಮಿತವ್ಯಯ ಪಾಲಿಸಬಹುದು ಎಂದರು.

ಸದಸ್ಯರಾದ ಶ್ರೀ ರಮೇಶ್‌ಹೆಗಡೆರವರು ಮಾತನಾಡಿ, ಆಯವ್ಯಯದಲ್ಲಿ ಕಂಪ್ಯೂಟರ್ ಖರೀದಿಗಾಗಿ ಬಹಳಷ್ಟು ಹಣ ಒದಗಿಸಲಾಗಿದೆ. ಆದರೆ, ಇತ್ತೀಚೆಗೆ ಆಧುನಿಕ ತಂತ್ರಜ್ಞಾನ ಆಧರಿಸಿ ಕಡಿಮೆ ಖರ್ಚಿನಲ್ಲಿ ಕಂಪ್ಯೂಟರ್‌ಗಳನ್ನು ದುರಸ್ಥಿ ಮಾಡಿ ಹೊಸ ಕಂಪ್ಯೂಟರ್‌ಗಳ ಮಾದರಿಯಲ್ಲಿಯೇ ಅಪ್‌ಡೇಟ್ ಮಾಡುತ್ತಾರೆ. ಇದರಿಂದ ಲಕ್ಷಾಂತರ ರೂಪಾಯಿಗಳ ಹಣ ಉಳಿತಾಯವಾಗುತ್ತದೆ. ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಮೊದಲ ಬಾರಿಗೆ ಪವರ್ ಪಾಯಿಂಟ್ ಮೂಲಕ ಆಯವ್ಯಯವನ್ನು ಅಚ್ಚುಕಟ್ಟಾಗಿ ಮಂಡಿಸಿದ್ದಕ್ಕಾಗಿ ಹಣಕಾಸು ಅಧಿಕಾರಿಗಳು ಹಾಗೂ ಅವರ ಸಿಬ್ಬಂದಿವರ್ಗದವರನ್ನು ಎಲ್ಲಾ ಸದಸ್ಯರು ಪ್ರಶಂಸಿಸಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ವಿಶ್ವವಿದ್ಯಾಲಯದ 2023–24ನೇ ಸಾಲಿನ ಆಯವ್ಯಯವನ್ನು ಅನುಮೋದಿಸಿದ ಸಭೆಯು ಅತಿಥಿ ಉಪನ್ಯಾಸಕರ ವೇತನವನ್ನು ಸರ್ಕಾರಿ ಕಾಲೇಜುಗಳಿಗೆ ನಿಗದಿಪಡಿಸಿದಂತೆ ಪರಿಷ್ಕರಿಸಲು ಹಾಗೂ ಶ್ರೀ ಮನೋಜ್ ಸಲ್ಡಾನಾರವರ ಹಾಗೂ ಶ್ರೀಮತಿ ಗೀತಾಂಜಲಿರವರು ನೀಡಿರುವ ಸಲಹೆಗಳನ್ನು ಪರಿಗಣಿಸಲು ಅಗತ್ಯ ಕ್ರಮ ಕೈಗೊಳ್ಳುವುದರ ಮೂಲಕ ವಿಶ್ವವಿದ್ಯಾಲಯದಲ್ಲಿ ಆರ್ಥಿಕ ಶಿಸ್ತನ್ನು ಕಾಪಾಡಬೇಕೆಂದು ಸರ್ವಾನುಮತದಿಂದ ನಿರ್ಣಯಿಸಿತು.

**2023:ಎಸಿ–1.08** 2017–18 ಮತ್ತು 2018–19ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳಿಗೆ ಸಿದ್ಧಪಡಿಸಿರುವ ಅನುಪಾಲನಾ ವರದಿಗಳ ಅನುಮೋದನೆ ಕುರಿತು.

**ನಿರ್ಣಯ:** ಚರ್ಚೆಯ ನಂತರ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ಸ್ವೀಕೃತವಾದ ವಿಶ್ವವಿದ್ಯಾಲಯದ 2017–18 ಮತ್ತು 2018–19ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳಿಗೆ ವಿಶ್ವವಿದ್ಯಾಲಯವು ಸಿದ್ಧಪಡಿಸಲಾದ ಅನುಪಾಲನಾ ವರದಿಗಳನ್ನು ಸಭೆಯು ಅನುಮೋದಿಸಿತು.

**2023:ಎಸಿ–1.08** **ಸದಸ್ಯರುಗಳು ಮಂಡಿಸಿರುವ ಪ್ರಸ್ತಾವನೆಗಳು:**

**2023:ಎಸಿ–1.08(1)** **ಬಿ.ಇಡಿ. ಸಮನ್ವಯ ಸಮಿತಿಯ ಕುರಿತು – ಡಾ.ಪರಮೇಶ ಮಸಲವಾಡ**

**ನಿರ್ಣಯ:** ಸದಸ್ಯರಾದ ಡಾ. ಡಾ.ಪರಮೇಶ ಮಸಲವಾಡರವರು ಮಾತನಾಡುತ್ತಾ, ರಾಜ್ಯದ ಹಲವು ವಿಶ್ವವಿದ್ಯಾಲಯಗಳಲ್ಲಿ ಇಲ್ಲದ ಬಿ.ಇಡಿ., ಮಾನಿಟರಿಂಗ್ ಸಮಿತಿಯು ನಮ್ಮ ವಿಶ್ವವಿದ್ಯಾಲಯದಲ್ಲಿ ಇದೆ. ಸಮಿತಿಯು ನಾಲ್ಕನೇ ಸೆಮಿಸ್ಟರ್ ವಿದ್ಯಾರ್ಥಿಗಳು ಶಾಲೆಗಳಿಗೆ ತೆರಳಿ ಕೈಗೊಳ್ಳುವ ಲೆಸನ್ ಪ್ಲಾನ್‌ಗೆ ಸಂಬಂಧಪಟ್ಟಂತೆ ಸಲ್ಲಿಸುವ ಸುಮಾರು 37 ದಾಖಲಾತಿಗಳನ್ನು ಪರಿಶೀಲಿಸುತ್ತದೆ. ರಾಜ್ಯದ ಕೆಲವು ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ಕೂಡ ಬಿ.ಇಡಿ. ವಿದ್ಯಾರ್ಥಿಗಳಿಗೆ ಶೇ.99ರಷ್ಟು ಅಂಕ ನೀಡುತ್ತಿದ್ದರೆ, ನಮ್ಮಲ್ಲಿ ಮಾತ್ರ ವಿದ್ಯಾರ್ಥಿ ಪಡೆದ ಅಂಕಗಳನ್ನು ಸಮಿತಿಯು ಪರಿಷ್ಕರಿಸಿ ಕಡಿತಗೊಳಿಸುತ್ತದೆ. ಇದರಿಂದಾಗಿ ನಮ್ಮ ವಿದ್ಯಾರ್ಥಿಗಳು ಕಡಿಮೆ ಅಂಕ ಪಡೆಯುತ್ತಿದ್ದಾರೆ. ಆದುದರಿಂದ, ಬಿ.ಇಡಿ.,ಗೆ ಸಮನ್ವಯ ಸಮಿತಿಯ ಅಗತ್ಯವಿಲ್ಲ ಎಂದರು. ಸದಸ್ಯರಾದ ಪ್ರೊ.ವೆಂಕಟೇಶ್ ಹಾಗೂ ಪ್ರೊ.ಎಸ್.ಕೆ.ನರಸಿಂಹಮೂರ್ತಿಯವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ರೆಗ್ಯುಲೇಷನ್ ಪ್ರಕಾರ ಸ್ನಾತಕೋತ್ತರ ಕೋರ್ಸ್‌ಗಳಿಗೆ ಕೋಆರ್ಡಿನೇಷನ್ ಬೋರ್ಡ್ ಕಾಲೇಜುಗಳಿಗೆ ತೆರಳಿ ಪರಿಶೀಲಿಸುತ್ತದೆ. ಶಿಕ್ಷಣದಲ್ಲಿ ಗುಣಮಟ್ಟ ಕಾಯ್ದುಕೊಳ್ಳುವ ಉದ್ದೇಶದಿಂದ ಇದು ಅಗತ್ಯವಾಗಿದೆ. ಇತ್ತೀಚೆಗೆ ಎಲ್ಲಾ ನೇಮಕಾತಿಗಳು ಕೂಡ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕವೇ ನಡೆಯುತ್ತಿದ್ದು, ವಿದ್ಯಾರ್ಥಿ ಪಡೆದ ಅಂಕಗಳಿಗಿಂತ ಜ್ಞಾನ ಮುಖ್ಯವಾಗುತ್ತದೆ ಎಂದರು. ಸುದೀರ್ಘ ಚರ್ಚೆಯ ನಂತರ ಕೋಆರ್ಡಿನೇಷನ್ ಬೋರ್ಡ್ ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲಿಸುವ ವ್ಯವಸ್ಥೆಯನ್ನು ಮುಂದುವರಿಸಲು ನಿರ್ಣಯಿಸಲಾಯಿತು.

**2023:ಎಸಿ–1.08(2)** **ಸಂಯೋಜಿತ ಕಾಲೇಜುಗಳಿಗೆ ಪಿಹೆಚ್.ಡಿ., ಸಂಶೋಧನಾ ಕೇಂದ್ರ ಮಂಜೂರು ಮಾಡುವ ಬಗ್ಗೆ – ಶ್ರೀ ಎ.ಟಿ.ಪದ್ಮೇಗೌಡ**

ಸದಸ್ಯರಾದ ಶ್ರೀ ಎ.ಟಿ.ಪದ್ಮೇಗೌಡರವರು ಮಾತನಾಡುತ್ತಾ, ಇತ್ತೀಚಿನ ದಿನಗಳಲ್ಲಿ ಪಿಹೆಚ್.ಡಿ., ಸಂಶೋಧನಾ ಪದವಿಗೆ ಬಹಳ ಮಹತ್ವ ಬಂದಿದೆ. ಪ್ರತಿವರ್ಷ ವಿಶ್ವವಿದ್ಯಾಲಯದಲ್ಲಿನ ಬಹಳಷ್ಟು ಅಧ್ಯಾಪಕರುಗಳು ನಿವೃತ್ತಿ ಹೊಂದುತ್ತಿದ್ದು, ಹೊಸ ನೇಮಕಾತಿಗಳು ಆಗುತ್ತಿಲ್ಲ. ಇದರಿಂದ, ಸಂಶೋಧನಾ ಮಾರ್ಗದರ್ಶಕರ ಸಂಖ್ಯೆ ಕಡಿಮೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸಂಯೋಜಿತ ಕಾಲೇಜುಗಳಲ್ಲಿ ಹೆಚ್ಚಿನ ಸಂಶೋಧನಾ ಕೇಂದ್ರಗಳನ್ನು ತೆರೆದು ಅಧ್ಯಾಪಕರುಗಳಿಗೆ ಮಾರ್ಗದರ್ಶಕರಾಗಿ ಮಾನ್ಯತೆ ನೀಡುವಂತೆ ಕೋರಿದರು. ಕೆಲವು ಸದಸ್ಯರು ಇದಕ್ಕೆ ಧ್ವನಿಗೂಡಿಸಿದರು. ಕುಲಸಚಿವರು ಮಾತನಾಡಿ, ಸರ್ಕಾರಿ ಕಾಲೇಜುಗಳಲ್ಲಿ ಆಗಾಗ್ಗೆ ಅಧ್ಯಾಪಕರನ್ನು ದೂರದ ಊರುಗಳಿಗೆ ವರ್ಗಾವಣೆ ಮಾಡುತ್ತಿದ್ದು, ಇದರಿಂದ ಸಂಶೋಧನಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂಬುದನ್ನು ತಿಳಿಸುತ್ತಾ, ಇತ್ತೀಚೆಗೆ ಭದ್ರಾವತಿಯ ಸರ್.ಎಂ.ವಿ. ವಿಜ್ಞಾನ ಕಾಲೇಜಿನಲ್ಲಿ ಸಂಶೋಧನಾ ಮಾರ್ಗದರ್ಶಕರಾಗಿದ್ದ ಅಧ್ಯಾಪಕರನ್ನು ಕಾರವಾರಕ್ಕೆ ವರ್ಗಾಯಿಸಿದ್ದು, ಪ್ರಯೋಗಶಾಲೆ ಆಧಾರಿತ ಸಂಶೋಧನೆಯನ್ನು ಒಳಗೊಂಡಿರುವ ಸಂಶೋಧಕರಿಗೆ ನಿರಂತರವಾಗಿ ಮಾರ್ಗದರ್ಶನದ ಅವಶ್ಯಕತೆ ಇರುತ್ತದೆ. ಇಂತಹ ಸಂದರ್ಭದಲ್ಲಿ ಸಂಶೋಧಕರಿಗೆ

ಸಮಸ್ಯೆಗಳಾಗುತ್ತದೆ ಎಂದರು. ಸದಸ್ಯರಾದ ಡಾ.ಶೇಖರ-ರವರು ಮಾತನಾಡಿ ಸಂಶೋಧನಾ ಮಾರ್ಗದರ್ಶಕರಾಗಿರುವ ಅಧ್ಯಾಪಕರಿಗೆ ವರ್ಗಾವಣೆಯಲ್ಲಿ ಕೆಲವು ವಿನಾಯಿತಿಗಳಿವೆ. ಆದಾಗ್ಯೂ, ಮಾರ್ಗದರ್ಶಕರನ್ನು ವರ್ಗಾವಣೆ ಮಾಡುತ್ತಿರುವುದರಿಂದ, ಈ ಕುರಿತು ಸರ್ಕಾರಕ್ಕೆ ಪತ್ರಿಸಬೇಕೆಂದರು. ಮಾನ್ಯ ಕುಲಪತಿಯವರು ಮಾತನಾಡಿ, ಪಿಹೆಚ್.ಡಿ., ಮಾರ್ಗದರ್ಶಕರಾಗಲು ವಿಶ್ವವಿದ್ಯಾಲಯದ ರೆಗ್ಯುಲೇಷನ್ ಹಾಗೂ ಯು.ಜಿ.ಸಿ., ನಿಯಮಗಳಡಿಯಲ್ಲಿ ಅರ್ಹತೆಯುಳ್ಳ ಅಧ್ಯಾಪರುಗಳು ಹಾಗೂ ಸಂಶೋಧನೆಗೆ ಅಗತ್ಯ ಸೌಲಭ್ಯ ಇರುವ ಮತ್ತು ಆಸ್ತಕಿಯುಳ್ಳ ಕಾಲೇಜಿನವರು ಸಂಶೋಧನಾ ಕೇಂದ್ರದ ಮಾನ್ಯತೆ ಕೋರಿ ನಿಯಮಾನುಸಾರ ಅರ್ಜಿ ಸಲ್ಲಿಸುವಂತೆ ತಿಳಿಸಿದ್ದನ್ನು ಸಭೆಯು ಒಪ್ಪಿತು.

**2023:ಎಸಿ–1.08(3)** **ಬಿ.ಇಡಿ. ಕೋರ್ಸ್‌ನ ಪರೀಕ್ಷಾ ಶುಲ್ಕ ಕುರಿತು – ಡಾ.ಜಿ.ಮಧು.**

ಸದಸ್ಯರಾದ ಡಾ.ಜಿ.ಮಧುರವರು ಮಾತನಾಡಿ, ಬಿ.ಇಡಿ., ಕೋರ್ಸ್ ಎನ್.ಇ.ಪಿ.ಗೆ ಒಳಪಡದಿದ್ದರೂ ಪರೀಕ್ಷಾ ಶುಲ್ಕವನ್ನು ಶೇ.100ರಷ್ಟು ಹೆಚ್ಚಿಸಲಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಆರ್ಥಿಕವಾಗಿ ಹೊರೆಯಾಗುತ್ತದೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಈ ದಿನ ಸಭೆಯಲ್ಲಿ ಪರೀಕ್ಷಾಂಗ ವಿಭಾಗದ ಕುಲಸಚಿವರು ಹಾಜರಿಲ್ಲ. ಆದುದರಿಂದ, ಈ ಬಗ್ಗೆ ಪರಿಶೀಲಿಸಲಾಗುವುದು ಎಂದು ನೀಡಿದ ಮಾಹಿತಿಯನ್ನು ಸಭೆಯು ಒಪ್ಪಿತು.

**2023:ಎಸಿ–1.08(4)** **ಪರೀಕ್ಷಾ ಜಾಗೃತದಳಕ್ಕೆ ಅಧ್ಯಾಪಕರ ನಿಯೋಜನೆ ಹಾಗೂ ಮಾನಿಟರಿಂಗ್ ಸಮಿತಿ ಸದಸ್ಯರ ಭತ್ಯೆ ಪರಿಷ್ಕರಣೆ ಕುರಿತು ಡಾ.ಪರಮೇಶ ಮಸಲವಾಡ.**

ಸದಸ್ಯರಾದ ಡಾ.ಪರಮೇಶ ಮಸಲವಾಡರವರು ಮಾತನಾಡಿ, ಪರೀಕ್ಷಾ ಜಾಗೃತ ದಳಕ್ಕೆ ಅಧ್ಯಾಪಕರನ್ನು ದೂರದ ಊರುಗಳಿಗೆ ನಿಯೋಜಿಸಲಾಗುತ್ತಿದೆ. ಉದಾಹರಣೆಗೆ, ಸಾಗರ ಕಾಲೇಜಿನವರನ್ನು ಕಳಸ ಮೂಡಿಗೆರೆಗಳಿಗೆ ನಿಯೋಜಿಸಿದಲ್ಲಿ ವಿಶ್ವವಿದ್ಯಾಲಯ ನೀಡುವ ದಿನಭತ್ಯೆಯಲ್ಲಿ ಊಟೋಪಚಾರ ಹಾಗೂ ವಾಸ್ತವ್ಯ ವೆಚ್ಚವನ್ನು ಭರಿಸಲು ಸಾಧ್ಯವಾಗುವುದಿಲ್ಲ ಆದುದರಿಂದ ಜಾಗೃತದಳಕ್ಕೆ ಸ್ಥಳೀಯರನ್ನು ಪರಿಗಣಿಸಬೇಕು ಎಂದರು.

ಮುಂದುವರೆದು ಮಾತನಾಡಿದ ಅವರು, ಬಿ.ಇಡಿ. ಮಾನಿಟರಿಂಗ್ ಸಮಿತಿಯ ಸದಸ್ಯರುಗಳಿಗೆ ಈ ಹಿಂದೆ ನೀಡಲಾಗುತ್ತಿದ್ದ ದಿನಭತ್ಯೆಯನ್ನು ಪರಿಷ್ಕರಿಸಿ ಕಡಿತಗೊಳಿಸಲಾಗಿದೆ. ಸಮಿತಿಯ ಸದಸ್ಯರು ಕಾಲೇಜಿಗೆ ಭೇಟಿ ನೀಡಿದಾಗ ಪ್ರತಿ ವಿದ್ಯಾರ್ಥಿಯ 37 ದಾಖಲೆಗಳಂತೆ ಪ್ರತಿ ಕಾಲೇಜಿನಲ್ಲಿ ಸುಮಾರು 100 ವಿದ್ಯಾರ್ಥಿಗಳ ದಾಖಲೆಗಳನ್ನು ಪರಿಶೀಲಿಸಬೇಕಾಗುತ್ತದೆ. ಕಾರ್ಯಭಾರ ಅಧಿಕವಾಗಿರುವುದರಿಂದ ದಿನಭತ್ಯೆ/ಸಂಭಾವನೆಯನ್ನು ಹೆಚ್ಚಿಸುವಂತೆ ತಿಳಿಸಿದರು. ಈ ವಿಷಯದ ಕುರಿತು ಮಾತನಾಡಿದ ಪ್ರೊ.ಗೀತಾ, ಸಿ., ರವರು ಈಗ ನಾನು ಶಿಕ್ಷಣ ನಿಕಾಯದ ಡೀನರ ಸ್ಥಾನದಿಂದ ಮಾತನಾಡುತ್ತಿದ್ದು, ಮಾನಿಟರಿಂಗ್ ಸಮಿತಿಯ ಸದಸ್ಯರಿಗೆ ದಿನಭತ್ಯೆ/ ಗೌರವಧನವನ್ನು ಈ ಹಿಂದೆ ದಿನವೊಂದಕ್ಕೆ ರೂ.1,000/–ಗಳಂತೆ ನೀಡಲಾಗುತ್ತಿತ್ತು. ಈಗ ಅದನ್ನು ಕಡಿತಗೊಳಿಸಿ ಕೇವಲ ರೂ.500/–ಗಳಿಗೆ ನಿಗದಿಪಡಿಸಿದ್ದಾರೆ. ಅಧಿಕ ಕಾರ್ಯಭಾರವಿರುವ ಈ ಕಾರ್ಯಕ್ಕಾಗಿ ತೆರಳುವ ಅಧ್ಯಾಪಕರು ಕೆಲವು ಸ್ಥಳಗಳಲ್ಲಿ ವಾಸ್ತವ್ಯ ಮಾಡಬೇಕಾಗುತ್ತದೆ. ವಿಶ್ವವಿದ್ಯಾಲಯ ನೀಡುವ ರೂ.500/–ಗಳಲ್ಲಿ ಊಟೋಪಚಾರ ಹಾಗೂ ವಾಸ್ತವ್ಯ ವೆಚ್ಚ ಭರಿಸಲು ಸಾಧ್ಯವಾಗುವುದಿಲ್ಲವಾದ್ದರಿಂದ ದಿನಕ್ಕೆ ರೂ.1,500/–ಗಳಂತೆ ನಿಗದಿಪಡಿಸಬೇಕೆಂದರು.

ಸುಧೀರ್ಘ ಚರ್ಚೆಯ ನಂತರ ಬಿ.ಇಡಿ., ಮಾನಿಟರಿಂಗ್ ಕಮಿಟಿಯ ಸದಸ್ಯರ ಭತ್ಯೆಯನ್ನು ದಿನಕ್ಕೆ ರೂ.1,500/– (ಒಂದು ಸಾವಿರದ ಐದುನೂರು ರೂಪಾಯಿಗಳು ಮಾತ್ರ)ರಂತೆ ನಿಗದಿಪಡಿಸಲು ಹಾಗೂ ಇದನ್ನು 2022–2023ನೇ ಸಾಲಿನಿಂದ ಅನ್ವಯಿಸುವಂತೆ ಸಭೆಯು ನಿರ್ಣಯಿಸಿತು.

**2023:ಎಸಿ-1.08(5) ಅತಿಥಿ ಉಪನ್ಯಾಸಕರ ನೇಮಕಾತಿ ಕುರಿತು - ಶ್ರೀಮತಿ ಗೀತಾಂಜಲಿ**

ಸದಸ್ಯರಾದ ಶ್ರೀಮತಿ ಗೀತಾಂಜಲಿರವರು ಮಾತನಾಡಿ, ಇತ್ತೀಚೆಗೆ ನಡೆದಿರುವ ಅತಿಥಿ ಉಪನ್ಯಾಸಕರ ನೇಮಕಾತಿಯ ಸಂದರ್ಭದಲ್ಲಿ ಅರ್ಥಶಾಸ್ತ್ರ ವಿಷಯದ ಬಾಹ್ಯ ಪರಿಣಿತರಿಲ್ಲದೆ ಸಂದರ್ಶನ ನಡೆಸಲಾಗಿದೆ. ವಿಷಯ ಪರಿಣಿತರಿಲ್ಲದೆ ಸಂದರ್ಶನ ನಡೆಸಬಹುದೇ? ಮತ್ತು ಅವರಿಲ್ಲದೇ ಕೋರಂ ಆಗುತ್ತದೆಯೇ? ಎಂದು ಪ್ರಶ್ನಿಸಿದ ಅವರು, ಆಯ್ಕೆಯಲ್ಲಿ ಹೆಚ್ಚಿನ ಅರ್ಹತೆ ಹೊಂದಿದವರನ್ನು ಪರಿಗಣಿಸಿಲ್ಲ ಎಂದರು. ಕಲಾ ನಿಕಾಯದ ಡೀನರಾದ ಪ್ರೊ.ಎಸ್.ಎನ್.ಯೋಗೀಶ್‌ರವರು ಮಾತನಾಡುತ್ತಾ, ಸಂದರ್ಶನದಲ್ಲಿ ವಿಷಯ ಪರಿಣಿತರಾಗಿ ಸಂಬಂಧಪಟ್ಟ ವಿಷಯದ ಅಧ್ಯಾಪಕರು/ವಿಭಾಗಾಧ್ಯಕ್ಷರು ಉಪಸ್ಥಿತರಿರುತ್ತಾರೆ. ಅಲ್ಲದೇ ಯು.ಜಿ.ಸಿ., ನಿಯಮಗಳ ಪ್ರಕಾರ ಅರ್ಹತೆ ಹೊಂದಿದವರನ್ನೇ ಆಯ್ಕೆ ಮಾಡಲಾಗಿದೆ ಎಂದರು. ಶ್ರೀಮತಿ ಗೀತಾಂಜಲಿರವರು ಈ ಕುರಿತು ವಿವರವಾದ ವರದಿ ನೀಡುವಂತೆ ಕೇಳಿದರು.

**2023:ಎಸಿ-1.09 ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ.**

**ಯಾವುದೂ ಇಲ್ಲ**

**2023:ಎಸಿ-1.10 ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

**2023:ಎಸಿ-1.08 ವಿಶ್ವವಿದ್ಯಾಲಯದ ದಾಖಲೆಗಳ ರಹಸ್ಯ ಕಾಪಾಡುವ ಕುರಿತು.**

ವಿಶ್ವವಿದ್ಯಾಲಯದ ಸಕ್ಷಮ ಪ್ರಾಧಿಕಾರಗಳ ನಿರ್ಣಯಗಳು, ಆಡಳಿತಾತ್ಮಕ ತೀರ್ಮಾನಗಳು ಕೆಲವು ಸುತ್ತೋಲೆ ಆದೇಶ ಮುಂತಾದುವುಗಳು ಕಾಲೇಜು/ವಿಭಾಗಗಳನ್ನು ತಲುಪುವ ಮೊದಲೇ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರ ವ್ಯಾಟ್ಸ್‌ಪ್‌ಗಳಲ್ಲಿ ಹರಿದಾಡುತ್ತಿವೆ. ರಹಸ್ಯ ಕಾಪಾಡುವ ನಿಟ್ಟಿನಲ್ಲಿ ಇದು ಸರಿಯಾದ ಕ್ರಮವಲ್ಲ. ಆದುದರಿಂದ ಈ ಬಗ್ಗೆ ಸೂಕ್ತ ಕ್ರಮ ಜರುಗಿಸುವಂತೆ ಸದಸ್ಯರುಗಳು ತಿಳಿಸಿದರು. ಈ ಕುರಿತಾಗಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಮಾನ್ಯ ಕುಲಪತಿಯವರು ಸಭೆಗೆ ತಿಳಿಸಿದರು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು

**ಕುಲಸಚಿವರು** | **ಸಹಿ/-**

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

**ಕುಲಪತಿಗಳು**